**ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ರವರು "ಹೆರುಂಡಿ ಮರಳು ಬ್ಲಾಕ್" (Block-2) ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣ ನದಿ ತೀರದ ಎದುರಿನ ಸರ್ವೆ.ನಂ: 96/2, 97/2, 98/2, 99/2, 107, ಹೆರುಂಡಿ ಗ್ರಾಮ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ ಒಟ್ಟು 18.00 ಎಕರೆ (7.28 ಹೆಕ್ಟರ್) ಪ್ರದೇಶದಲ್ಲಿ ವಾರ್ಷಿಕ 75,174 MTPA ಸಾಮಾನ್ಯ ಮರಳು ಗಣಿಗಾರಿಕೆಯನ್ನು ಅರೆ ಯಾಂತ್ರಿಕೃತ ಪದ್ದತಿಯ ತೆರೆದ ಕಾಸ್ಟ್ ಕ್ವಾರಿಯ (Opencast Semi-Mechanised Method) ಪ್ರಕಾರ ಮಾಡಲು ಉದ್ದೇಶಿಸಿರುತ್ತಾರೆ. ಈ ಪ್ರಯುಕ್ತ ಉದ್ದೇಶಿತ ಯೋಜನೆಯ ಕುರಿತು ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.**

ದಿನಾಂಕ: 13.06.2022.

ಸಮಯ: ಮಧ್ಯಾಹ್ನ 3.00 ಘಂಟೆ.

ಸ್ಥಳ: ಹೆರುಂಡಿ ನವ ಗ್ರಾಮದ ಹತ್ತಿರ

ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ರವರು "ಹೆರುಂಡಿ ಮರಳು ಬ್ಲಾಕ್" (Block-2) ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣ ನದಿ ತೀರದ ಎದುರಿನ ಸರ್ವೆ.ನಂ: 96/2, 97/2, 98/2, 99/2, 107, ಹೆರುಂಡಿ ಗ್ರಾಮ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ ಒಟ್ಟು 18.00 ಎಕರೆ (7.28 ಹೆಕ್ಟರ್) ಪ್ರದೇಶದಲ್ಲಿ ವಾರ್ಷಿಕ 75,174 MTPA ಸಾಮಾನ್ಯ ಮರಳು ಗಣಿಗಾರಿಕೆಯನ್ನು ಅರೆ ಯಾಂತ್ರಿಕೃತ ಪದ್ದತಿಯ ತೆರೆದ ಕಾಸ್ಟ್ ಕ್ವಾರಿಯ (Opencast Semi-Mechanised Method) ಪ್ರಕಾರ ನಡೆಸಲು ಉದ್ದೇಶಿಸಿರುತ್ತಾರೆ. ಈ ಕುರಿತು ದಿನಾಂಕ: 13.06.2022 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು ರಾಯಚೂರು ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | ಹೆರುಂಡಿ ನವ ಗ್ರಾಮದ ಹತ್ತಿರ, ಹೆರುಂಡಿ ಗ್ರಾಮ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | ಅನುಬಂಧ-1 |
| ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | ಅನುಬಂಧ-4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | ಅನುಬಂಧ-5 |

ಕೇಂದ್ರ ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ಇವರು ದಿನಾಂಕ : 14.09.2006 (ತಿದ್ದುಪಡಿ ದಿನಾಂಕ : 01.12.2009) ರಂದು ಹೊರಡಿಸಿದ ಅಧಿಸೂಚನೆಯ ಪ್ರಕಾರ ಮೇಲಿನ ಉದ್ದೇಶಿತ ಯೋಜನೆಗೆ ಪರಿಸರ ವಿಮೋಚನಾ ಪತ್ರವನ್ನು ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಬೆಂಗಳೂರು ಇವರಿಂದ ಈ ಅಧಿಸೂಚನೆಯ ಪ್ರಕಾರ, ಪರಿಸರ ಸಾರ್ವಜನಿಕ ಆಲುಕೆ ಸಭೆಯನ್ನು

ಆಯೋಜಿಸುವ ಜವಾಬ್ದಾರಿಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯದ್ದಾಗಿರುತ್ತದೆ. ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರು ಮೇಲಿನ ಯೋಜನೆಗೆ Terms Of Reference ಅನ್ನು ದಿನಾಂಕ: 06.12.2021 ರಂದು ಅಂತಿಮಗೊಳಿಸಿ ನೀಡಿದ್ದು, ಅದರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸಲು ಕೋರುವಂತೆ ಮೆ: ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್, ಹಟ್ಟಿ, ಲಿಂಗಸೂಗೂರು ತಾಲ್ಲೂಕು, ರಾಯಚೂರು ಜಿಲ್ಲೆ ಇವರಿಗೆ ತಿಳಿಸಿರುತ್ತಾರೆ. ಸದರಿ ಕಂಪನಿಯವರು ತಮ್ಮ ಪತ್ರ ದಿನಾಂಕ: 02.02.2022 ರ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಾರ್ವಜನಿಕ ಪರಿಸರ ಸಭೆಯನ್ನು ನಡೆಸಲು ಕೋರಿರುತ್ತಾರೆ. ಈ ಕೋರಿಕೆ ಮೇರೆಗೆ, ಮಾನ್ಯ ಜಿಲ್ಲಾಧಿಕಾರಿಗಳ ಒಪ್ಪಿಗೆ ಮತ್ತು ದಿನಾಂಕ ನಿಗದಿಪಡಿಸಲಾಯಿತು.

ಮೇಲಿನ ಅಧಿಸೂಚನೆ ಅನ್ವಯ ಯೋಜನೆದಾರರು ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಸಮಯ ನೀಡಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ ಇದ **"ವಿಜಯ ಕರ್ನಾಟಕ" (ಕನ್ನಡ), "ಡೆಕ್ಕನ್ ಹೆರಾಲ್ಡ್" (ಆಂಗ್ಲ) ಭಾಷೆಯಲ್ಲಿ ದಿನಾಂಕ: 14.05.2022 ರಂದು ಹಾಗೂ ಸ್ಥಳೀಯ ಮಟ್ಟದಲ್ಲಿ "ಸುದ್ದಿಮೂಲ" ದಿನ ಪತ್ರಕೆಯಲ್ಲಿ ದಿನಾಂಕ: 21.05.2022** ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಮುಂದುವರೆದು, ಯೋಜನಾ ಸ್ಥಳದಲ್ಲಿ ವಾಸವಾಗಿರುವ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ಬಾದಿತರಾಗುವ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ ಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ರಾಯಚೂರು ಜಿಲ್ಲೆ ಇವರಿಗೆ ಸಲ್ಲಿಸುವಂತೆ ಸದರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಮೇಲಿನ ಪ್ರಕಟಣೆಯಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮೇಲೆ ನಿಗದಿಪಡಿಸಿದ ಸ್ಥಳದಲ್ಲಿ ದಿನಾಂಕ: 13.06.2022 ರಂದು ಮಧ್ಯಾಹ್ನ 3.00 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ರಾಯಚೂರು ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಆರಂಭದಲ್ಲಿ, ಶ್ರೀ. ರಾಘವ, ಮ್ಯಾನೇಜರ್, ಮೇ: ಹಟ್ಟಿ ಗೋಲ್ಡ್ ಮೈನಿಂಗ್ ಕಂಪನಿ, ಇವರು ಶ್ರೀ. ದುರಗೇಶ್, ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ರಾಯಚೂರು ಜಿಲ್ಲೆ ಮತ್ತು ಎಂ. ಎಸ್. ನಟೇಶ್, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ರಾಯಚೂರು ಹಾಗೂ ಕಾರ್ಯಕ್ರಮಕ್ಕೆ ಆಗಮಿಸಿದ ಸರ್ಕಾರಿ ಅಧಿಕಾರಿಗಳು ಮತ್ತು ಸಭೆಯಲ್ಲಿ ಉಪಸ್ಥಿತರಿಂದ ಗ್ರಾಮಸ್ಥರಿಗೆ, ಸಾರ್ವಜನಿಕರಿಗೆ ಮತ್ತು ಮಾಧ್ಯಮದವರಿಗೆ ಸ್ವಾಗತವನ್ನು ಕೋರಿದರು ಮತ್ತು ಯೋಜನೆಯ ಬಗ್ಗೆ ವಿವರಣೆಯನ್ನು ನೀಡಿದರು.

ಮುಂದುವರೆದು, ಶ್ರೀಮತಿ. ಇಂಪಾ, EIA ಸಲಹೆಗಾರರು, ಹುಬರ್ಟ್ ಎನ್ವಿರೋ ಕೇರ್ ಸಿಸ್ಟಮ್ಸ್ (ಪಿ) ಲಿಮಿಟೆಡ್, ಚೆನ್ನೈ, ಇವರು ಯೋಜನೆಯ ಪರಿಸರ ಅಧ್ಯಯನ ವರದಿಯ ಪಾತ್ರಕ್ಷೆತೆಯನ್ನು ಪ್ರಚುರಪಡಿಸಿದರು.

ಅಪರ ಜಿಲ್ಲಾಧಿಕಾರಿಗಳು ಸಭೆ ಬಗ್ಗೆ ಸಾರ್ವಜನಿಕರಿಗೆ ವಿವರ ನೀಡಿ ಅಹವಾಲುಗಳನ್ನು ಲಿಖಿತವಾಗಿ ಅಥವಾ ಖುದ್ದು ಸಭೆ ಮುಂದೆ ಮಂಡಿಸಲು ಸೂಚಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ಸ್ಥಳೀಯ ಗ್ರಾಮಸ್ಥರು ಈ ಕೆಳಕಂಡ ಅಹವಾಲುಗಳನ್ನು ಮಂಡಿಸಿದರು.

**1. ಶ್ರೀ. ವೀರನಗೌಡ, ಹೇರುಂಡಿ ಗ್ರಾಮ:-**

ಕಳೆದ 25 ವರ್ಷಗಳಿಂದ ಗಣಿಗಾರಿಕೆ ನಿಂತಿದೆ. ಮರಳು ನದಿಯಲ್ಲಿ ಸಿಗುತ್ತಿಲ್ಲ. ಪಕ್ಕದ ಸುರುಪುರ ತಾಲ್ಲೂಕಿನ ಜನ ಆಕ್ರಮವಾಗಿ ಗಣಿಗಾರಿಕೆ ಮಾಡುತ್ತಿದ್ದಾರೆ. ಆಕ್ರಮ ಮರಳುಗಣಿಗಾರಿಕೆಯಿಂದ ಹೊಲ ಕೊಚ್ಚಿ ಹೋಗಿದ್ದು, ರಸ್ತೆ ಸಹ ಹಾಳಾಗಿದೆ. ಪ್ರಸ್ತಾಪಿತ ಗಣಿಗಾರಿಕೆಯಡಿ ಸ್ಥಳೀಯರಿಗೆ ಅನುಕೂಲ ಮಾಡಿ ಕೊಡಬೇಕೆಂದು ಕೋರಿದರು.

**2. ಶ್ರೀ. ಶಿವನಗೌಡ ಜಿ ಪಾಟೀಲ್, ಹೇರುಂಡಿ ಗ್ರಾಮ:-**

ಸ್ಥಳೀಯ ನದಿ ಪಾತ್ರದಲ್ಲಿ ಎಡ ಮತ್ತು ಬಲ ದಡದಲ್ಲಿ 17 ಸ್ಥಳಗಳಲ್ಲಿ ಮರಳು ಗಣಿಗಾರಿಕೆ ನಡೆಸುತ್ತಿದ್ದು, ಅಲ್ಪ-ಸ್ವಲ್ಪ ಮರಳು ಉಳಿದಿದೆ. ಆದ್ದರಿಂದ ಪ್ರಸ್ತಾಪಿತ ಗಣಿಗಾರಿಕೆ ತಮ್ಮ ಒಪ್ಪಿಗೆ ಇಲ್ಲ ಎಂದು ತಿಳಿಸಿದರು.

**3. ಶ್ರೀ. ನಾಗರಾಜ್ ಪಾಟೀಲ್, ಹೇರುಂಡಿ ಗ್ರಾಮ:-**

ಸ್ಥಳೀಯ ಗ್ರಾಮಸ್ಥರ ಒಪ್ಪಿಗೆ ಪಡೆದು ಸರ್ಕಾರ ಮರಳು ಗಣಿಗಾರಿಕೆ ಮಾಡಬೇಕು. ನದಿ ಪಾತ್ರದಲ್ಲಿ ಬೋರ್‌ವೆಲ್‌ನಿಂದ ನೀರು ಪೂರೈಕೆ ಮಾಡಬೇಕೆಂದು ಕೋರಿದರು.

**4. ಶ್ರೀ. ಮಲ್ಲಪ್ಪ, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಹೇರುಂಡಿ ಗ್ರಾಮ:-**

ನದಿಯಲ್ಲಿ ಮರಳು ಇರುವಿಕೆ ಬಗ್ಗೆ ತಿಳಿದು ನಂತರ ಗಣಿಗಾರಿಕೆ ಮಾಡಬೇಕೆಂದು ತಿಳಿಸಿದರು.

5. ಶ್ರೀ. ಸಿದ್ದಯ್ಯ ಸ್ವಾಮಿ, ಗ್ರಾಮ ಪಂಚಾಯಿತಿ ಸದಸ್ಯರು, ಹೇರುಂಡಿ ಗ್ರಾಮ:-

ನದಿಯಲ್ಲಿ ಮರಳು ಇಲ್ಲದ ಕಾರಣ, ಗಣಿಗಾರಿಕೆ ಮಾಡುವುದು ಬೇಡ ಎಂದು ತಿಳಿಸಿದರು.

ವಂದನಾರ್ಪಣೆಯೊಂದಿಗೆ ಈ ಸಭೆಯು ಮುಕ್ತಾಯಗೊಂಡಿತು.

ಮಾನ್ಯ ಜಿಲ್ಲಾಧಿಕಾರಿಗಳಿಂದ
ಟಿಪ್ಪಣಿ ಅನುಮೋದಿಸಲ್ಪಟ್ಟಿದೆ.

13/06/2022

ಅಪರ ಜಿಲ್ಲಾಧಿಕಾರಿಗಳು ~~ಮತ್ತು~~
ಜಿಲ್ಲಾ ದಂಡಾಧಿಕಾರಿಗಳು ಮತ್ತು
ಪರಿಸರ ಸಾರ್ವಜನಿಕ ಆಲಿಕೆ ಸಭೆ
ಅಧ್ಯಕ್ಷರು, ರಾಯಚೂರು